# ಕಾರುಣ್ಯದ ದಯಾಗೀತೆ

ಪ್ರಭುತ್ವವೊಂದಕ್ಕೆ ಧರ್ಮ, ಅಧ್ಯಾತ್ಮ ಅಥವಾ ಭಕ್ತಿ ಎಂಬುವು ನರಳುತ್ತಿರುವ ಜನರಿಂದ ಪಲಾಯನ ಮಾಡುವ ಹಾದಿಯಾಗಬಾರದು! ಅದೇ ಸಮಯದಲ್ಲಿ ಸಮುದಾಯಗಳ ನಡುವೆ ಪಾಲುಮಾರಿಕೆ ಮಾಡಿ ದ್ವೇಷವನ್ನು ಬಿತ್ತಬಾರದು ಎನ್ನುವುದು ಸಾಮಾನ್ಯವಾದ ವಿವೇಕ. ಅಂತಿಮವಾಗಿ ಆಧ್ಯಾತ್ಮಿಕತೆ ಎನ್ನುವುದು ತಾಳಿನಿಂದ ತುದಿಯತನಕ ಮಾನವೀಯತೆ, ಒಗ್ಗೂಡಿ ಬಾಳುವ ಹಾಗೂ ಲೋಕಹಿತದ ಹುಡುಕಾಟವಾಗಿರಬೇಕು. ಲೋಕವು ಇಂದು ರೋಗಗ್ರಸ್ತವಾಗಿ ನರಳುತ್ತಿರುವುದು ಮನುಷ್ಯ ಸೃಷ್ಟಿಸಿರುವ ಅತಾರ್ಕಿಕ ದ್ವೇಷ, ಹಿಂಸೆ ಮತ್ತು ಪ್ರತೀಕಾರದಿಂದ. ದ್ವೇಷ ಮತ್ತು ಹಿಂಸೆ ಲೋಕಕ್ಕೆ ಮಾಡಿರುವಷ್ಟು ಗಾಯವನ್ನು ಮತ್ಯಾವ ಆಯುಧವೂ ಮಾಡಿಲ್ಲ! ಧರ್ಮ ಧರ್ಮಗಳ ನಡುವಿನ ತಾರತಮ್ಯವು ಮನುಷ್ಯ ಮಾಡುತ್ತಿರುವ ಕೆಡುಕನ್ನು ದ್ವಿಗುಣಗೊಳಿಸಿದೆ. ದ್ವೇಷದಿಂದ ಕೂಡಿರುವ ಹಿಂಸಾತ್ಮಕ ಮನೋಭಾವದ ಅಧಿಕಾರ ಜನತೆಯ ಬದುಕನ್ನು ನರಕವನ್ನಾಗಿಸಿದೆ.

ವ್ಯಕ್ತಿಯನ್ನು ಸಬಲೀಕರಣಗೊಳಿಸಿ, ಆತನ ಸ್ವಾಭಿಮಾನದ ಕಳಸ ತಲೆಯೆತ್ತುವಂತೆ ಮಾಡುವುದು ಹಾಗೂ ಆತನಿಗೆ ಅನ್ನ ನೀಡುವುದು ಅವನ ದುಡಿಮೆಯ ಕಾಯಕವೇ ಹೊರತು, ಯಾವುದೇ ತತ್ತ್ವಸಿದ್ಧಾಂತವಲ್ಲ! ಕಾಯಕವನ್ನು ಸಂಪೂರ್ಣ ಶ್ರದ್ಧೆಯಿಂದ ಮಾಡುವುದೇ ನಿಜವಾದ ದೈವಿಕ ಸಾಧನೆ ಎನ್ನುವುದನ್ನು ಬೌದ್ಧ ತತ್ತ್ವಜ್ಞಾನಿ ಸರಹಪಾದ, ವಚನಕಾರರು, ತತ್ತ್ವಸಾಧಕರು ಹಾಗೂ ಕುವೆಂಪು ಅವರ ದರ್ಶನಗಳು ನಮಗೆ ಮನಗಾಣಿಸುತ್ತವೆ. ಅಧ್ಯಾತ್ಮ ಎನ್ನುವುದು ನಮ್ಮ ಲೌಕಿಕ ಬದುಕಿನಾಚೆಯ ಅಮೂರ್ತ ವಿಚಾರವಲ್ಲ! ತರ್ಕವಲ್ಲ! ಸಂಸಾರವನ್ನು ಹೇಯಸ್ಥಲವೆಂದು ತಿಳಿಯುವುದೂ ಅಲ್ಲ! ಅದು ಲೋಕದ ಜಂಜಡಗಳೊಂದಿಗೆ ಇದ್ದು, ಯಾವುದಕ್ಕೂ ಅಂಟಿಕೊಳ್ಳದೆ ಇರುವುದು. ನಮ್ಮ ಸಂತರು, ಯೋಗಿಗಳು ಈಸಿ ಜಯಿಸಿದ್ದು ಹೀಗೆಯೇ. 'ಈ ಸಂಸಾರ ಕಾಡಿಗೆಯ ಕೋಣೆಯಂತೆ. ಅದರಲ್ಲಿದ್ದು ಕಪ್ಪು ಹಚ್ಚಿಕೊಳ್ಳದೇ ಹೊರಬೀಳುವ ದಾಸನಿಗೆ ಶರಣು' ಎನ್ನುತ್ತಾನೆ ಕಬೀರ.

ಕುವೆಂಪು ಅವರ 'ಜಲಗಾರ'ನೂ ಕೂಡ ಕಾಯಕದ ಮೂಲಕವೆ ಅರಿವಿನ ಜ್ಯೋತಿಯನ್ನು ತನ್ನೊಳಗೆ ಬೆಳಗಿಸಿಕೊಂಡು, ಲೋಕದ ತಮಂಧವನ್ನೂ ಬೆಳಗಿಸಿದವನು. ತನ್ನ ಕಾಯಕದಲ್ಲೇ ಶಿವನನ್ನು ಕಾಣುವ ಜಲಗಾರ 'ನನ್ನ ಭಾಗಕೆ ಪೊರಕೆ ಆರತಿ. ಗುಡಿಸುವುದೇ ನನ್ನ ದೇವರ ಪೂಜೆ' ಎಂದು ರೈತನೊಬ್ಬನಿಗೆ ನಿಜವಾದ ದೇವರ ಪೂಜೆ ಏನೆಂಬುದನ್ನು ತಿಳಿಯಹೇಳಿದ 'ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು? ಉಳುವಾಗ, ನೆಡುವಾಗ ಪೂಜೆಮಾಡುವೆ ನೀನು. ದೇಗುಲದ ಪೂಜಕನು ಬೈಗಿನಲಿ ಬೆಳಗಿನಲಿ ಪೂಜಿಸಿದರೇನಂತೆ? ನಮ್ಮ ಜೀವವೆ ನಿಚ್ಚ ಪೂಜೆ. ನಮ್ಮ ಕರ್ಮವೆ ನಿತ್ಯಯೋಗ' ಎಂದು ಸತ್ಯದರ್ಶನ ಮಾಡಿಸುತ್ತಾನೆ. ಜಲಗಾರನ ಇಂತಹ ಪ್ರಾರ್ಥನೆ ಲೋಕಹಿತಕ್ಕಾಗಿ ಶುದ್ಧ ಹೃದಯದಿಂದ ಹೊರಹೊಮ್ಮಿರುವ ಭಾವಗಳ ತೀವ್ರ ಅಭಿವ್ಯಕ್ತಿಯಾಗಿದೆ. ದುಡಿಮೆಯಲ್ಲಿಯೇ ಶಿವನನ್ನು ಕಾಣುವ ಜಲಗಾರನಲ್ಲಿದ್ದ ವಿವೇಕ ಮತ್ತು ಕಾಯಕಶ್ರದ್ಧೆ ಎಲ್ಲರದೂ ಆಗಬೇಕು. ಇದನ್ನೇ ಖಲೀಲ್ ಗಿಬ್ರಾನ್ 'ನಿಮ್ಮ ದಿನನಿತ್ಯದ ಬದುಕೇ ನಿಮ್ಮ ದೇವಾಲಯ, ನಿಮ್ಮ ಧರ್ಮ' ಎಂದು ಹೇಳಿದ. ಹೀಗೆ 'ಜಲಗಾರ' ನಾಟಕ ಮಾನವೀಯತೆ, ಸಮಾನತೆ, ವೈಚಾರಿಕ ಶ್ರದ್ಧೆ ಮತ್ತು ದುಡಿಮೆಯ ಸೌಂದರ್ಯವನ್ನು ಆಳವಾದ ಅರಿವಿನ ಮೇಲೆ ಕಟ್ಟಿಕೊಡುತ್ತದೆ. ಈ ನಾಟಕ ಪ್ರಕಾಶಗೊಂಡು 98 ವರ್ಷಗಳು ಸಂದರೂ ಇಂದಿಗೂ ಇದು ನೀಡುವ ಲೋಕದರ್ಶನ ಎಲ್ಲ ಕಾಲಕ್ಕೂ ಪ್ರಸ್ತುತವಾದದ್ದು.

ಹೇಳುವ ವಿಚಾರ ಅದೆಷ್ಟೇ ಮೌಲಿಕವಾಗಿದ್ದರೂ; ಅದನ್ನು ಆಚರಿಸುವ ನಡವಳಿಕೆ ಹೇಳುವವನಲ್ಲಿ ಇಲ್ಲದಿದ್ದರೆ ಅದು ಜನಸಾಮಾನ್ಯರ ಕಣ್ಣಲ್ಲಿ ನಕಲಿಯಾಗಿಬಿಡುತ್ತದೆ! ಹೆಣ್ಣಿನ ಶಕ್ತಿಯನ್ನು ಕುರಿತು ಮೈದುಂಬಿ ಮಾತನಾಡುವ ನಮ್ಮ ಸಮಾಜದೊಳಗೆ ಮಹಿಳೆಯರ ಬದುಕುವ ಹಕ್ಕನ್ನೇ ಚಿವುಟಿಹಾಕುವ ಪ್ರವೃತ್ತಿ ಎಲ್ಲೆಡೆ ಸಾಮಾನ್ಯವಾಗುತ್ತಿದೆ. ನಡುಬೀದಿಯಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸಿ ಅಪಮಾನಗೊಳಿಸುತ್ತಿರುವ ಹೀನ ಕೃತ್ಯಗಳು ಯಾವ ಎಗ್ಗೂ ಇಲ್ಲದೆ ನಡೆಯುತ್ತಿವೆ. ಇವೆಲ್ಲವೂ ಇಂದು ಸಮಾಜದ ನೈತಿಕತೆಯನ್ನೇ ಪ್ರಶ್ನಿಸುತ್ತಿವೆ! ಅವರು ಗಳಿಸಿದ ಪದಕ ಪ್ರಶಸ್ತಿಗಳು ಈಗ ರಾತ್ರಿಯಾಗುವುದನ್ನೇ ಕಾಯುತ್ತಿವೆ, ನಕ್ಷತ್ರಗಳಾಗಿ ಬಾಂದಳವನ್ನು ಸೇರಲು. ಅಲ್ಲೊಂದು ಕಣ್ಣೀರು, ಹಗಲಿನಲ್ಲೂ ಬಳ್ಳಿಯೊಂದರಿಂದ ಮಣ್ಣಿಗೆ ಉದುರಿದ ಮೊಗ್ಗು! ಜಗತ್ತಿಗೆ ಇಂದು ಅಗತ್ಯವಿರುವುದು ದಯೆ, ಸಕಲಜೀವಿಗಳ ಒಳಿತಿಗಾಗಿ ಪ್ರಾರ್ಥಿಸುವ ಹೃದಯ. ಯಾರ ಬದುಕು ನಿಸ್ವಾರ್ಥತೆಯಿಂದ, ಲೋಕಕಾರುಣ್ಯದಿಂದ ಕೂಡಿರುವುದೋ ಅಂತಹ ಚೇತನಗಳನ್ನು ಜಗತ್ತು ಮತ್ತೆ ಮತ್ತೆ ಬಯಸುತ್ತದೆ. 'ನಿಮ್ಮಲ್ಲಿ ಪ್ರೀತಿ ಇದೆಯೇ ನೀವು ಸರ್ವಶಕ್ತರು, ನೀವು ಸಂಪೂರ್ಣ ನಿಸ್ವಾರ್ಥಿಗಳೇ ಹಾಗಿದ್ದರೆ ನಿಮ್ಮನ್ನು ಯಾರೂ ಎದುರಿಸಲಾಗದು' ಎಂದ ವಿವೇಕಾನಂದರ ನುಡಿ ನಮ್ಮನ್ನು ಜಾಗೃತಗೊಳಿಸುತ್ತದೆ. 'ಪ್ರೇಮವೆಂದರೆ ಸಹನೆ; ಪ್ರೇಮವೆಂದರೆ ದಯೆ / ಪ್ರೇಮದಲ್ಲಿ ಅಸೂಯೆ ಇಲ್ಲ, ಪ್ರೇಮದಲ್ಲಿ ಪ್ರತಿಷ್ಠೆಯಿಲ್ಲ' ಎಂದು ಬೈಬಲ್ ನಮ್ಮ ಹೃದಯದ ಸಮೀಪಕ್ಕೆ ಬಂದು ಹೇಳುತ್ತಿದೆ.

ದಯೆ, ಪ್ರೇಮ ಅಹಿಂಸೆಯ ತತ್ತ್ವಗಳೇ ಧರ್ಮದ ತಿರುಳು. ಮಹಾಭಾರತದಲ್ಲಿ ವಿವೇಕವಂತರಾದ ಯಾರಾದರೂ ಹಿರಿಯರು, ಋಷಿ–ಮುನಿಗಳು, ಆಚಾರ್ಯರು, ಧರ್ಮ ಪರಿಪಾಲಕರು, ಅನ್ನದ ಋಣಕ್ಕೆ ತಲೆಬಾಗಿದವರು, ಶೂರರು, ಕಾಲಜ್ಞಾನಿಗಳು ನಿಜವಾದ ಧರ್ಮದ ತಿರುಳನ್ನು ಬಲ್ಲವರಾಗಿದ್ದರೆ, ಕುರುಕ್ಷೇತ್ರದಲ್ಲಿ ನದಿಯಂತೆ ರಕ್ತ ಹರಿಯುತ್ತಿರಲಿಲ್ಲ! ಹಸುಗೂಸುಗಳು ತಬ್ಬಲಿಯಾಗುತ್ತಿರಲಿಲ್ಲ! ಹೆತ್ತವರು ತಮ್ಮ ಕಣ್ಣಮುಂದೆಯೇ ಮಕ್ಕಳ ಸಾವನ್ನು ನೋಡುತ್ತಿರಲಿಲ್ಲ! ಹೆಣ್ಣುಮಕ್ಕಳು ಗಂಡನನ್ನು ಕಳೆದುಕೊಳ್ಳುತ್ತಿರಲಿಲ್ಲ! ಆದರೆ ಕೊಂದವರೆದೆಯಲ್ಲಿ ಬರಿ ರಾಜ್ಯಾಧಿಕಾರ, ಗೆಲುವು, ಪ್ರತಿಷ್ಠೆ, ಸ್ವಾರ್ಥ ಇವುಗಳೇ ತುಂಬಿಕೊಂಡಿದ್ದರಿಂದ, ಅವರ ಹೃದಯ ಕ್ಷಮೆ, ದಯೆ ಇಲ್ಲದೆ ಮಸಣವಾಗಿತ್ತು! ಆದ್ದರಿಂದಲೇ ಅಷ್ಟೊಂದು ಹತ್ಯೆ ಧರ್ಮ ಸಂಸ್ಥಾಪನೆಯ ಹೆಸರಿನಲ್ಲಿ ನಡೆಯಿತು. ಹೋಗಲಿ, ಕೊನೆಗೆ ಕೊಂದವರಾದರೂ ಉಳಿದರೇ!

ಇಂದಿನ ಜಗತ್ತೂ ಕೂಡ ಇದನ್ನೇ ಅನುಸರಿಸುತ್ತಿದೆ. ದ್ವೇಷ, ಹಿಂಸೆ ಮತ್ತು ಸ್ವಾರ್ಥದ ಕಿಚ್ಚಿಗೆ ಜಗತ್ತು ಬೇಯುತ್ತಿದೆ. ಜಗತ್ತು ಬದುಕುಳಿಯಲು ಬೇಕಿರುವುದು ಪ್ರೇಮ ಮಾತ್ರ. ಏಕೆಂದರೆ 'ಪ್ರೇಮ ಎಲ್ಲವನ್ನೂ ತಾಳಿಕೊಳ್ಳುತ್ತದೆ; ಎಲ್ಲವನ್ನೂ ನಂಬುತ್ತದೆ/ಎಲ್ಲವನ್ನೂ ಆಶಿಸುತ್ತದೆ, ಎಲ್ಲವನ್ನೂ ಸಹಿಸುತ್ತದೆ' ದ್ವೇಷದಿಂದ ಧಗಧಗಿಸುತ್ತಿರುವ ಜಗತ್ತಿನ ಹೃದಯಕ್ಕೆ ಬೈಬಲ್‌ನ ಈ ದಯಾಗೀತೆ ಕಾರುಣ್ಯದ ಮಳೆಯನ್ನೇ ಸುರಿಸಲಿ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸಾವಿರ ಯುದ್ಧಗಳನ್ನು ಗೆಲ್ಲುವುದಕ್ಕಿಂತ ನಿಮ್ಮನ್ನು ನೀವು ಗೆಲ್ಲುವುದು ಉತ್ತಮವಾಗಿದೆ. ಇದು ನಿಜವಾದ ವಿಜಯ.

  –ಗೌತಮ ಬುದ್ಧ
- ಕಿವಿಕೊಡುವ ಸದ್ಬುದ್ಧಿ ಇದ್ದರೆ ನಾವು ನಮ್ಮ ಜೀವನದಲ್ಲಿನ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದು.

  –ಪೂರ್ಣಚಂದ್ರ ತೇಜಸ್ವಿ
- ಇಬ್ಬರು ಮೂರ್ಖರು ಸೇರಿ ಒಬ್ಬ ಶಕ್ತಿಶಾಲಿಯನ್ನು ಸೋಲಿಸುವುದೇ ಪ್ರಜಾಪ್ರಭುತ್ವ.

  –ಅಟಲ್ ಬಿಹಾರಿ ವಾಜಪೇಯಿ
- ಬದುಕುವ ಛಲವಿದ್ದರೆ ನಿನ್ನ ಶತ್ರುಗಳ ಎದುರಲ್ಲೇ ಬದುಕು. ಅವರು ನಿನ್ನ ಎದುರು ಸುಳಿದಾಗಲೆಲ್ಲಾ ನಿನ್ನಲ್ಲಿ ಬದುಕುವ ಛಲ ಎಚ್ಚೆತ್ತುಕೊಳ್ಳುತ್ತದೆ.

  –ಸ್ವಾಮಿ ವಿವೇಕಾನಂದ
- ಕ್ರೌರ್ಯಕ್ಕೆ ಕ್ರೌರ್ಯವೇ ಉತ್ತರ ಎನ್ನುವವರು ನಿಶ್ಚಿತವಾಗಿಯೂ ಬೌದ್ಧಿಕ ದಾರಿದ್ರ್ಯವನ್ನು ಅನುಭವಿಸುತ್ತಿರುತ್ತಾರೆ. ಅದು ವಿಷವರ್ತುಲದ ಆರಂಭವಷ್ಟೆ.

  –ಮಹಾತ್ಮ ಗಾಂಧಿ